ಹಾಕಿದ್ದ. ಮಗನಿಗೆ ಯಾವುದಾದರೂ ಪ್ರೈವೇಟ್ ಕಂಪನಿಯಲ್ಲಿ ಎಂಥದ್ದಾದರೊಂದು ಕೆಲಸ ಸಿಗುವ ಭರವಸೆ ಇತ್ತು.

''ಅದೇನು ಹೇಳು ಪೆಂಚಾಲ್, ನನ್ನತ್ರ ಹೇಳಾಕಾಗ್ದೆ ಇರೋವಂಥ ಸಂಗ್ತೀನ.'' ಎಂದು ದೇವೇಗೌಡ ಸ್ವಲ್ಪ ಮುಖ ಸಿಂಡರಿಸಿದ್ದ. ಅರ್ಧ ಗಂಟೆಯ ಹಿಂದೆಯಷ್ಟೆ ಕಮಿಷನರ್ ಚೇಂಬರಿಗೆ ಹೋಗಿ ಬಂದಿದ್ದ ಪೆಂಚಾಲಯ್ಯನಿಗೆ ಕಮಿಷನರ್ ಮಾತುಗಳು ಬೆವರಿಳಿಯುವಂತೆ ಮಾಡಿದ್ದವು. ''ನನ್ನ ರಿಟೈರ್ಮೆಂಟ್ ಫೈಲ್ ಕಮಿಷನರ್ ಹತ್ರ ಐತೆ ದೇವೇಗೌಡ. ಕ್ಲಿಯರೆನ್ಸ್ ಫೈಲ್ಗೆ ಸೈನ್ ಹಾಕಲ್ಲ ಅಂತ ರೇಗಿದ್ರು.'' ಎಂದ ಪೆಂಚಾಲಯ್ಯನ ಮಾತಿಗೆ, ''ಅದೇನಪ್ಪ ಅಂಥದ್ದು, ನಾನು ಕಂಡಂಗೆ ನಿನ್ನ ಮೇಲೆ ಯಾವ ಒಂದು ಸಣ್ಣ ರಿಮಾರ್ಕೂ ಇದ್ದಂಗಿಲ್ಲ. ಸಾಹೇಬ್ರ ಮೂಡೇನಾದ್ರೂ ಕೆಟ್ಟಿಟ್ಟಿತ್ತೋ ಏನೋ. ನಾಳೆ ಒಳ್ಳೆ ಟೈಮ್ ನೋಡ್ಕಂಡು ಕಾಣಿಕ್ಯರಾಜುಗೆ ಸಾಹೇಬ್ರತ್ರ ಫೈಲ್ ತಗೊಂಡೋಗೋಕೆ ಹೇಳೋಣ ಬಿಡು.'' ಎಂದು ದೇವೇಗೌಡನ ಮಾತು ಮುಗಿಯುವುದರೊಳಗೆ ಪೆನ್ಷನ್ ಫೈಲುಗಳನ್ನು ನೋಡಿಕೊಳ್ಳುತ್ತಿದ್ದ ಕಾಣಿಕ್ಯರಾಜು ಅಲ್ಲಿಗೆ ಬಂದಿದ್ದ. ಅಂಥ ಫೈಲುಗಳನ್ನು ಅಡಿಷನಲ್ ಕಮಿಷನರ್ ಮತ್ತು ಕಮಿಷನರ್ ಹತ್ತಿರ ತೆಗೆದುಕೊಂಡು ಹೋಗುವವನು ಅವನೇ. ಎಲ್ಲಾ ಹೈಯರ್ ಆಫೀಸರ್‍ರುಗಳೂ ಫೈಲುಗಳಲ್ಲಿ ಏನಾದರೂ ಇಂಪಾರ್ಟೆಂಟ್ ನೋಟ್ಸನ್ನು ಬರೆಯಬೇಕಾದರೋ, ಇಲ್ಲ ಆದೇಶಗಳನ್ನು ಮಾಡಬೇಕಾದರೋ ಕಾಣಿಕ್ಯರಾಜುವನ್ನು ಕರೆಸಿಕೊಂಡು ಕಾಫಿ ತರಿಸಿ, ''ಕರೆಕ್ಟ್ ಇದ್ಯಾ ನೋಡ್ರಿ ಕಾಣಿಕ್ಯರಾಜು, ಸೈನ್ ಹಾಕಿಬಿಡ್ಲಾ.'' ಎನ್ನುತ್ತಿದ್ದರು. ಅವನನ್ನು ನೋಡಿದ ಕೂಡಲೇ ದೇವೇಗೌಡ, ''ಏನ್ರಿ ಕಾಣಿಕ್ಯರಾಜು ನಮ್ಮ ಪೆಂಚಾಲಯ್ಯನ ಫೈಲ್‌ನಲ್ಲಿ ಏನ್ ಪ್ರಾಬ್ಲಂ.'' ಎಂದು ಕೇಳಿದ್ದ. ''ಹೋಗ್ರಿ ಸಾ, ಕಮಿಷನರ್ ಸಾಹೇಬ್ರು ಸಖತ್ತಾಗಿ ಕ್ಲಾಸ್ ತಗೊಂಡ್ರು ನಂಗೆ. ಅಡಿಷನಲ್ ಕಮಿಷನರ್ ಸಾಹೇಬ್ರುನ ಯಂಗೋ ಕನ್ವಿನ್ಸ್ ಮಾಡಿದ್ದೆ. ಕಮಿಷನರ್ ಕಣ್ಣು ಅದೆಷ್ಟು ಚುರ್ಕಾಗಿದೆ ಗೊತ್ತಾ ಸಾರ್. ನನ್ನೆದುರಿಗೇನೇ ಫೋನ್‌ನಲ್ಲಿ ಅಡಿಷನಲ್ ಕಮಿಷನರ್ ಮೇಲೆ ಬೇಜಾರು ಮಾಡ್ಕಂಡ್ರು.'' ಎಂದ ಕಾಣಿಕ್ಯರಾಜುನ ಧ್ವನಿಯಲ್ಲೂ ಗಾಬರಿ ತುಂಬಿಕೊಂಡಿತ್ತು. ದೇವೇಗೌಡ, ''ಅದು ಸರಿ ಕಾಣಿಕ್ಯರಾಜು, ಏನು ಮ್ಯಾಟರ್ ಅಂತ ಹೇಳ್ರಿ.'' ಎಂದು ತಲೆಬಿಸಿ ಮಾಡಿಕೊಂಡಿದ್ದ. ''ಸಾರ್, ಡೇಟ್ ಆಫ್ ಬರ್ತ್ ಪ್ರಾಬ್ಲಂ. ಪೆಂಚಾಲಯ್ಯನವರ ಸರ್ವೀಸ್ ರಿಜಿಸ್ಟರ್‌ನಲ್ಲೆ ಅಲ್ಲದೆ ಎಸ್ಸೆಸ್ಸೆಲ್ಸಿ ಮಾರ್ಕ್ಸ್ ಕಾರ್ಡ್, ಟ್ರಾನ್ಸ್‌ಫರ್ ಸರ್ಟಿಫಿಕೇಟ್ ಎಲ್ಲದರಲ್ಲೂ ಇವರ ಡೇಟ್ ಆಫ್ ಬರ್ತ್ ಫೆಬ್ರುವರಿ ಮೂವತ್ತು, ಸಾವಿರದ ಒಂಬೈನೂರ ಐವತ್ತೇಳು ಎಂದು ನಮೂದಾಗಿದೆ. ಜಗತ್ತಿನ ಯಾವ ದೇಶದ ಕ್ಯಾಲೆಂಡರ್‌ನಲ್ಲಿ ಆ ದಿನಾಂಕ ಸಿಗ್ತದೆ ಹೇಳಿ ಸಾರ್. ಅದನ್ನೇ ಕಮಿಷನರ್ ಸಾಹೇಬ್ರು ತಲೆ ಕೆಡಿಸ್ಕಂಡಿರೋದು. ಕಾಲಚಕ್ರದಲ್ಲಿ ಫೆಬ್ರುವರಿ ಮೂವತ್ತನೇ ತಾರೀಖು ಬರುವುದೇ ಇಲ್ಲ ಎಂದ ಮೇಲೆ ಪೆಂಚಾಲಯ್ಯ ಅನ್ನೋ ವ್ಯಕ್ತಿ ಹುಟ್ಟೇ ಇಲ್ಲ. ಅಂದ ಮೇಲೆ ಅವರು ನಿವೃತ್ತಿ ಆಗೋ ಪ್ರಮೇಯವೇ ಇಲ್ಲ. ಹಾಗಾಗಿ ಫೈಲಿಗೆ ನಾನು ಸೈನ್ ಮಾಡುವುದಿಲ್ಲ. ಸೃಷ್ಟಿಯಲ್ಲಿ ಇಲ್ಲದೆ ಇರೋ ದಿನಾಂಕವನ್ನೇ ತನ್ನ ಹುಟ್ಟಿದ ದಿನಾಂಕವನ್ನಾಗಿ ಇಟ್ಟುಕೊಂಡು, ಅದು ತಪ್ಪೆಂದು ತಿಳಿದೂ ವಿದ್ಯಾಭ್ಯಾಸ ಮತ್ತು ಸರ್ಕಾರಿ ನೌಕರಿ ಸಮಯದಲ್ಲೂ ತಿದ್ದುಪಡಿ ಮಾಡಿಸದೆ ವಂಚಿಸಿರುವುದರಿಂದ ಪೆಂಚಾಲಯ್ಯನನ್ನು ಕೂಡಲೇ ಸಸ್ಪೆಂಡ್ ಮಾಡಲು ಕಡತ ಮಂಡಿಸಬೇಕೆಂದು ಕಮಿಷನರ್ ಸಾಹೇಬ್ರು ಹೇಳಿದ್ದಾರೆ ಸಾರ್.'' ಎಂದು ಹೇಳುತ್ತಾ ಕಾಣಿಕ್ಯರಾಜು ಕೂಡಾ ಕರ್ಚೀಫಿನಿಂದ ಮುಖ, ಕೊರಳು ಒರೆಸಿಕೊಂಡಿದ್ದ. ಫೈಲಿನಲ್ಲಿ ಅದೊಂದು ಮಿಸ್ಟೇಕ್ ತನ್ನ ಕಣ್ಣಿಗೆ ಏಕೆ ಬೀಳಲಿಲ್ಲವೆಂದು ಅಚ್ಚರಿ ಪಡುತ್ತಾ, ತಮ್ಮ ಕಣ್ಣೇ ತಮಗೆ ಮೋಸ ಮಾಡುವುದಾದರೆ, ಪ್ರಪಂಚದಲ್ಲಿ ಇನ್ಯಾರನ್ನು ನಂಬುವುದೆಂದು ಚಿಂತೆಗೆ ಬಿದ್ದ.

ಪ್ರಿಯ ಓದುಗರೇ, ನಮ್ಮ ಮುಗ್ಧ ಕಥಾನಾಯಕ ಪೆಂಚಾಲಯ್ಯನು ಇಂಥ ವಿಚಿತ್ರ ಸಂಕಟಕ್ಕೆ